## ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ

# "ಬನ್ನಿ ಮುನ್ನಡೆಯೋಣ" – ರೇಡಿಯೋ ಕಾರ್ಯಕ್ರಮ

*ಆತ್ಮೀಯ ಸ್ನೇಹಿತರೇ, ಮುನ್ನಡೆಯಿಂದ ಇದೊಂದು ಹೊಸ ಪ್ರಯತ್ನ.*

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಫೆಬ್ರವರಿ 14, 2009ರಿಂದ "ಬನ್ನಿ ಮುನ್ನಡೆಯೋಣ" ಎಂಬ ರೇಡಿಯೋ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುತ್ತಿದೆ. **ಎಫ್.ಎಂ. ರೈನ್‌ಬೋ 101.3** ವಾಹಿನಿಯಲ್ಲಿ ಪ್ರಸಾರವಾಗುವ ಈ ಕಾರ್ಯಕ್ರಮದಲ್ಲಿ ಕಾರ್ಮಿಕರು ತಿಳಿದುಕೊಳ್ಳಲೇ ಬೇಕಾದ ಕೆಲವು ಕಾನೂನುಗಳ ಬಗ್ಗೆ ತಿಳಿಸಲಾಗುತ್ತಿದೆ. **ಫೆಬ್ರವರಿ 14ನೇ** ತಾರೀಖಿನಿಂದ ಪ್ರತಿ ಶನಿವಾರ ಬೆಳಗ್ಗೆ 8.02ಕ್ಕೆ ಈ ಕಾರ್ಯಕ್ರಮ ಪ್ರಾರಂಭವಾಗಲಿದೆ.

ನಿಮಗೆಲ್ಲರಿಗೂ ತಿಳಿದಿರುವಂತೆ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಕಳೆದ ನಾಲ್ಕು ವರ್ಷಗಳಿಂದ ಮಹಿಳಾ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಸಮಾಜದಲ್ಲಿ ಹಾಗೂ ಕೆಲಸದ ಸ್ಥಳದಲ್ಲಿ ಅವರ ಸ್ಥಾನಮಾನಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತಿದೆ. ಈ ಉದ್ದೇಶವನ್ನು ಸಾಧಿಸಲು ಮುನ್ನಡೆ ಹಲವಾರು ರೀತಿಯ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಆದರೆ ಬೆಂಗಳೂರಿನಲ್ಲಿರುವ ಸುಮಾರು 3.52ರಷ್ಟು ಕಾರ್ಮಿಕರನ್ನು ಮುಟ್ಟಲು, ಒಂದು ವಿಶಾಲ ಮಾಧ್ಯಮ ಬೇಕು ಎಂದು ಮುನ್ನಡೆ ಯೋಚಿಸಿದಾಗ ಹೊಳೆದದ್ದು, ಈ ರೇಡಿಯೋ ಕಾರ್ಯಕ್ರಮ. ಅದರ ಪ್ರತಿಫಲವೇ "ಬನ್ನಿ ಮುನ್ನಡೆಯೋಣ" ಕಾರ್ಯಕ್ರಮದ ರೇಡಿಯೋ ಪ್ರಸ್ತುತಿ.

**ದಯವಿಟ್ಟು ಪ್ರತಿಯೊಬ್ಬರೂ ಫೆಬ್ರವರಿ 14ರಿಂದ ಪ್ರತಿ ಶನಿವಾರ ಬೆಳಿಗ್ಗೆ 8.00 ಗಂಟೆಗೆ**

**ಎಫ್.ಎಂ ರೈನ್ ಬೋ 101.3 ಕೇಳುವುದನ್ನು ಮರೆಯದಿರಿ. ತಾವೂ ಕೇಳಿ, ತಮ್ಮ ಗೆಳೆಯರಿಗೂ ಕೇಳಿಸಿ.**

| ದಿನಾಂಕ | ವಾರ | ಸಮಯ (ಗಂಟೆಗಳಲ್ಲಿ) (ಬೆಳಗ್ಗೆ) | ಅವಧಿ | ವಿಷಯ |
|---|---|---|---|---|
| 14.02.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಕನಿಷ್ಠ ವೇತನ |
| 21.02.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಇಎಸ್ಐ/ಪಿಎಫ್ |
| 28.02.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಕೆಲಸದಿಂದ ತೆಗೆದುಹಾಕುವುದು |
| 07.03.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಬೋನಸ್ / ಗ್ರಾಚುಟಿ |
| 14.03.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಓವರ್ ಟೈಮ್ (ಹೆಚ್ಚುವರಿ ಕೆಲಸ) |
| 21.03.2009 | ಶನಿವಾರ | 8.02 ರಿಂದ 08.32 | 30 ನಿಮಿಷ | ಪ್ರಶ್ನೋತ್ತರ–ಹೇಮಲತಾ ಮಹಿಷಿ ಅವರಿಂದ–ಖ್ಯಾತ ವಕೀಲರು, ವಿಷಯ – 'ಕೌಟುಂಬಿಕ ದೌರ್ಜನ್ಯ' |
| 28.03.2009 | ಶನಿವಾರ | 8.02 ರಿಂದ 0812 | 10 ನಿಮಿಷ | ಗಳಿಕೆ ರಜೆ/ಲೀವ್ |
| 04.04.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಕೌಟುಂಬಿಕ ದೌರ್ಜನ್ಯ |
| 11.04.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಕಾರ್ಖಾನೆಗಳಲ್ಲಿ ಬ್ರಾಂಡ್‌ಗಳ ಸೋಷಿಯಲ್ ಆಡಿಟಿಂಗ್ |
| 18.04.2009 | ಶನಿವಾರ | 8.02 ರಿಂದ 08.12 | 10 ನಿಮಿಷ | ಫ್ಯಾಕ್ಟರಿಗಳಲ್ಲಿರಬೇಕಾದ ಮೂಲ ಸೌಕರ್ಯಗಳು |
| 25.04.2009 | ಶನಿವಾರ | 8.02 ರಿಂದ 08.32 | 30 ನಿಮಿಷ | ಪ್ರಶ್ನೋತ್ತರ–ವಿಷಯ–ಗಾರ್ಮೆಂಟ್ಸ್ ಉದ್ಯಮದಲ್ಲಿ ಕಾರ್ಮಿಕ ಸಂಘಟನೆಗಳು |

*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:*

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ,** ನಂ. 8/3, ಶ್ರೀ ಮಾತಾ ನಿಲಯ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು –560 026. ದೂರವಾಣಿ: **26751320**